# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/122/2015-16 ದಿನಾಂಕ:27.07.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| *ಅರ್ಜಿದಾರರು* | *ತಕರಾರುದಾರರು* |
|---|---|
| ರಾಮಿಬಾಯಿ ಗಂಡ ಲೇಟ್ ಭೀಮಾನಾಯ್ಕ<br>ಗ್ರಾಮ:-ಕೆ.ಕೆ.ತಾಂಡ ತಾ:-ಹೆಚ್.ಬಿ.ಹಳ್ಳಿ | ನಾಗನಾಯ್ಕ ತಂದೆ ಟೀಕ್ಯಾನಾಯ್ಕ<br>ಗ್ರಾಮ:-ಕೆ.ಕೆ.ತಾಂಡ ತಾ:-ಹೆಚ್.ಬಿ.ಹಳ್ಳಿ |

**ವಿವಾದಿತ ಜಮೀನಿನ ವಿವರ:**

| *ಕ್ರ.ಸಂ.* | *ತಾಲೂಕು* | *ಗ್ರಾಮದ ಹೆಸರು* | *ಸ.ನಂ.* | *ವಿಸ್ತೀರ್ಣ(ಎಕರೆಗಳಲ್ಲಿ)* | *ತರಹೆ* |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಕೆ.ಕೋಡಿಹಳ್ಳಿ | 65 | 4-36 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕೆ.ಕೋಡಿಹಳ್ಳಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕೆ.ಕೆ.ತಾಂಡ ಗ್ರಾಮದ ನಿವಾಸಿಯಾದ ರಾಮಿಬಾಯಿ ಗಂಡ ಲೇಟ್ ಭೀಮಾನಾಯ್ಕ ಇವರು ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆಯನ್ನು ಮಾಡಲು ದಿನಾಂಕ:30.03.2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ:13.04.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಿರುವುದಿಲ್ಲ. ನಾಗನಾಯ್ಕ ತಂದೆ ಟೀಕ್ಯಾನಾಯ್ಕ ಇವರು ನಮೂನೆ-21 ಕ್ಕೆ ಸಹಿ ಮಾಡಲು ನಿರಾಕರಿಸಿರುತ್ತಾರೆ ಆದ ಕಾರಣ, ಎಂ.ಆರ್.ನಂ.59/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:09.06.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:09.06.2016 ರಿಂದ 14.07.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯ ಪಕ್ಷಕಾರರು ಹಾಗೂ ವಂಶವೃಕ್ಷದಲ್ಲಿರುವ ವಾರಸುದಾರರು ಹಾಜರಾಗಿರುತ್ತಾರೆ. ವಾರಸುದಾರರು ಹೇಳುವಂತೆ; ನಮ್ಮ ಅಜ್ಜನಾದ ಲಂಬಾಣಿ ಲಚುಮಪ್ಪ ಇವರ ಹೆಸರಿಗೆ ಇರುವ ಒಟ್ಟು ಜಮೀನು ಸ.ನಂ.64 ವಿಸ್ತೀರ್ಣ 14-78 ಮತ್ತು ಸ.ನಂ.65 ವಿಸ್ತೀರ್ಣ 4-36 ಒಟ್ಟು 19.14 ಎಕರೆ ಜಮೀನುಗಳಲ್ಲಿ ಸ.ನಂ.64 ವಿಸ್ತೀರ್ಣ 8-00 ಎಕರೆ ಜಮೀನು ಘಮ್ಯನಾಯ್ಕ, ವಿಸ್ತೀರ್ಣ 4-78 ಎಕರೆ ಜಮೀನು ನಾಗನಾಯ್ಕ ತಂದೆ ಟೀಕ್ಯನಾಯ್ಕ, ವಿಸ್ತೀರ್ಣ 2-00 ಎಕರೆ ಜಮೀನು ರೆಡ್ಡಿನಾಯ್ಕ ತಂದೆ ದುರ್ಗ್ಯಾನಾಯ್ಕ ಇವರ ಹೆಸರಿಗೆ ಇರುತ್ತದೆ. ಘಮ್ಯನಾಯ್ಕ ಇವರ ಜಮೀನು ಸ.ನಂ.64 ವಿಸ್ತೀರ್ಣ 8-00 ಎಕರೆ ಪೈಕಿ 4-00 ಎಕರೆ ಜಮೀನು ನನ್ನ ಅಣ್ಣನಾದ ಚಂದ್ರನಾಯ್ಕ ಇವರಿಗೆ ಬಿಟ್ಟುಕೊಡುವುದಾಗಿ ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಅರ್ಜಿದಾರರು ಹಾಜರಾಗಿ ಹೇಳುವಂತೆ; ನನ್ನ ಗಂಡನ ಹೆಸರಿಗೆ/ನನ್ನ ಹೆಸರಿಗೆ ಆಗಲಿ ಯಾವುದೇ ಜಮೀನಿನ ಪಟ್ಟಾ, ಪಹಣಿಯಲ್ಲಿ ಹೆಸರು ನಮೂದಾಗಿರುವದಿಲ್ಲ. ಸದರಿ ಜಮೀನುಗಳಲ್ಲಿ ನಾನು ಸುಮಾರು 55 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದೇನೆ. ಆದ ಕಾರಣ ನನ್ನ ಹೆಸರಿಗೆ ಪೌತಿವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಕೋರಿರುತ್ತಾರೆ.

ಸದರಿ ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ವಾರಸುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆಮಾಡಲಾಗಿ, ಕೆ.ಕೋಡಿಹಳ್ಳಿ ಗ್ರಾಮದ ಸ.ನಂ.65 ವಿಸ್ತೀರ್ಣ 4-36 ಎಕರೆ ಜಮೀನು ಪೌತಿ ಪಟ್ಟಾದಾರರಾದ ಲಂಬಾಣಿ ಲಚುಮಪ್ಪ ಇವರ ಹೆಸರಿಗೆ ಪಹಣಿ ಇದ್ದು, ಇವರು ಪೌತಿಯಾಗಿರುವ ಕಾರಣ, ಅರ್ಜಿದಾರರಾದ ರಾಮಿಬಾಯಿ ಗಂಡ ಲೇಟ್ ಭೀಮಾನಾಯ್ಕ ಇವರ ಜೊತೆಗೆ ವಂಶವೃಕ್ಷದಂತೆ ವಾರಸುದಾರರಾದ[ಜೀವಂತ]

- ಉಮಾನಾಯ್ಕ ತಂದೆ ಲೇಟ್ ಭೀಮಾನಾಯ್ಕ, ಚಂದ್ರನಾಯ್ಕ ತಂದೆ ಲೇಟ್ ಹೇಮ್ಲನಾಯ್ಕ, ಘಮ್ಯನಾಯ್ಕ ತಂದೆ ಹೇಮ್ಲನಾಯ್ಕ, ನಾಗನಾಯ್ಕ ತಂದೆ ಲೇಟ್ ಟೀಕ್ಯಾನಾಯ್ಕ, ರೆಡ್ಡಿನಾಯ್ಕ ತಂದೆ ಲೇಟ್ ದುರ್ಗ್ಯಾನಾಯ್ಕ, ಹರಿಶ್ಚಂದ್ರನಾಯ್ಕ ತಂದೆ ಲೇಟ್ ದುರ್ಗ್ಯಾನಾಯ್ಕ, ಇವರ ಹೆಸರುಗಳನ್ನು ಜಂಟಿಯಾಗಿ ನಮೂದಿಸಿ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.59/2015-16 ರ ಪ್ರಕಾರ, ಪ್ರಕರಣದಲ್ಲಿ ಕೆ.ಕೋಡಿಹಳ್ಳಿ ಗ್ರಾಮದ ಸ.ನಂ.65 ವಿಸ್ತೀರ್ಣ 4-36 ಎಕರೆ ಜಮೀನಿಗೆ ಈ ಕೆಳಗಿನಂತೆ ಜಂಟಿಯಾಗಿ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

| ಕ್ರಮ ಸಂಖ್ಯೆ | ತಾಲೂಕು | ಗ್ರಾಮ | ಸರ್ವೆ ನಂಬರ್ | ವಿಸ್ತೀರ್ಣ | ಹಕ್ಕು ಬದಲಾವಣೆ ಪಡೆದವರು |
|---|---|---|---|---|---|
| 01 | ಹಗರಿಬೊಮ್ಮನಹಳ್ಳಿ | ಕೆ.ಕೋಡಿಹಳ್ಳಿ | 65 | 4-36 | 1.ರಾಮಿಬಾಯಿ ಗಂಡ ಲೇಟ್ ಭೀಮಾನಾಯ್ಕ<br>2.ಉಮಾನಾಯ್ಕ ತಂದೆ ಲೇಟ್ ಭೀಮಾನಾಯ್ಕ<br>3.ಚಂದ್ರನಾಯ್ಕ ತಂದೆ ಲೇಟ್ ಹೇಮ್ಲನಾಯ್ಕ<br>4.ಘಮ್ಯನಾಯ್ಕ ತಂದೆ ಲೇಟ್ ಹೇಮ್ಲನಾಯ್ಕ<br>5.ನಾಗನಾಯ್ಕ ತಂದೆ ಲೇಟ್ ಟೀಕ್ಯಾನಾಯ್ಕ<br>6.ರೆಡ್ಡಿನಾಯ್ಕ ತಂದೆ ಲೇಟ್ ದುರ್ಗ್ಯಾನಾಯ್ಕ<br>7.ಹರಿಶ್ಚಂದ್ರನಾಯ್ಕ ತಂದೆ ಲೇಟ್ ದುರ್ಗ್ಯಾನಾಯ್ಕ |

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:27.07.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

27/7/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

ಉಪ ತಹಶೀಲ್ದಾರರು,
ನಾಡ ಕಚೇರಿ, ಕೋಗಳಿ

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಶುದ್ಧಪ್ರತಿ ಕಡತಕ್ಕೆ.